**<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>**

ಸಿ.ಸಿ. ನಂಃ 1532/2022 ಸಿಡಬ್ಲ್ಯೂ: 1 ಪಿಡಬ್ಲ್ಯೂ: 1

ಪ್ರಮಾಣವಚನ ಬೋಧಿಸಲಾಯಿತು ದಿಃ 29-07-2025

ಹೆಸರು : ಜಗದೇವಿ

ಗಂಡ ಹೆಸರು : ಶಿವಶರಣಪ್ಪ

ವಯಸ್ಸು : 63 ವರ್ಷ

ಉದ್ಯೋಗ : ಒಕ್ಕಲುತನ

ವಾಸಸ್ಥಳ : ಹಂಗನಹಳ್ಳಿ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಚಾಸಾ-4 ನನ್ನ ಗಂಡ. ಚಾಸಾ-5 ನನ್ನ ಮಗ. ಚಾಸಾ-6 ರಿಂದ 8 ನಮ್ಮ ಊರಿನವರು.

ಆರೋಪಿತರು ಗೊತ್ತು. 1 ನೇ ಆರೋಪಿತಳು ನನ್ನ ಸೊಸೆ. 2 ರಿಂದ 4 ನೇ ಆರೋಪಿತರು ನಮ್ಮ ಸಂಬಂಧಿಕರು. ಆರೋಪಿತರು ಮತ್ತು ನಮ್ಮ ನಡುವೆ ಯಾವುದೇ ರೀತಿಯ ಗಲಾಟೆ ಆಗಿರುವುದಿಲ್ಲ. ಆರೋಪಿತರು ನನಗೆ ಹಾಗೂ ಚಾಸಾ-4 ರವರಿಗೆ ಹೋಡೆ ಬಡೆ ಮಾಡಿ ಜೀವ ಬೆದರಿಕೆ ಹಾಕಿಲ್ಲ ಮತ್ತು ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ. ನಾನು ಯಾವುದೇ ರೀತಿಯ ಪಿರ್ಯಾದನ್ನು ನೀಡಿಲ್ಲ ಮತ್ತು ಈ ಪ್ರಕರಣದ ಬಗ್ಗೆ ಯಾವುದೇ ರೀತಿಯ ಮಾಹಿತಿ ಇಲ್ಲ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ದೂರಾಗಿದ್ದು ಸಾಕ್ಷಿಯು ಸದರಿ ದಾಖಲಾತಿ ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಆದರೇ ನಿಪಿ-1 ರಲ್ಲಿರುವ ವಿಷಯಗಳು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**<u>ವಾಟೀಸವಾಲುಃ</u>** ಮಾನ್ಯ ಸ.ಸ.ಅ ರವರಿಂದ:

ದಿಃ17.07.2022 ರಂದು ರಾತ್ರಿ 8-00 ಗಂಟೆ ಸುಮಾರಿಗೆ ನಾನು ಮತ್ತು ಚಾಸಾ-4 ರವರು ಮನೆಯಲ್ಲಿ ಇದ್ದಾಗ 1 ರಿಂದ 4 ನೇ ಆರೋಪಿತರೆಲ್ಲರೂ ಅಕ್ರಮಕೂಟ ರಚಿಸಿಕೊಂಡು ಬಂದು ನನ್ನ

ಸೊಸೆ ಆದ 1 ನೇ ಆರೋಪಿತಳು ನನ್ನ ಗಂಡನ ಆಸ್ತಿಯಲ್ಲಿ ಯಾಕೆ ಪಾಲು ಕೊಡುತ್ತಿಲ್ಲ ಅಂತಾ ಜಗಳ ತೆಗೆದಳು ಎಂದರೆ ಸರಿಯಲ್ಲ. ಆಗ ನಾವು ಇನ್ನೂ ನಮ್ಮ ಮಕ್ಕಳ ಮದುವೆ ಆಗುವರೆಗೆ ಪಾಲ ಕೊಡುವುದಿಲ್ಲ ಅಂತಾ ಅಂದೇವು ಎಂದರೆ ಸರಿಯಲ್ಲ. ಆಗ 1 ನೇ ಆರೋಪಿತಳು ನೀನು ಮುದಿಕಿ ಆದರೂ ನಿನ್ನ ಧಿಮಾಕು ಹೋಗಿಲ್ಲ ಮತ್ತು ನನಗೆ ಪಾಲ ಕೊಡುವುದಿಲ್ಲ ಅಂತಾ ರೆಂಡಿ, ಬೊಸಡಿ ಇವತ್ತು ನಿನಗೆ ಬಿಡೋದಿಲ್ಲ ಅಂತಾ ಅಂದಿದರು ಎಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿತರು ನನ್ನ ಕೂದಲು ಹಿಡಿದು ಎಳೆದಾಡ ಹತ್ತಿದ್ದಾಗ ಚಾಸಾ-4 ರವರು ಬಿಡಿಸಲು ಬಂದಾಗ 3 ಮತ್ತು 4 ನೇ ಆರೋಪಿತರು ಚಾಸಾ-4 ರವರಿಗೆ ಹಿಡಿದುಕೊಂಡಿದ್ದರು ಎಂದರೆ ಸರಿಯಲ್ಲ. ಆಗ 3 ನೇ ಆರೋಪಿತನು ಚಾಸಾ-4 ರವರಿಗೆ ಬಡಿಗೆ ತಗೆದುಕೊಂಡು ಚಾಸಾ-4 ರವರ ಎಡ ಮೊಣಕಾಲಿಗೆ ಹೊಡೆದು ಗುಪ್ತ ಗಾಯಪಡಿಸಿದ್ದರು ಎಂದರೆ ಸರಿಯಲ್ಲ. ಆಗ ಚಾಸಾ-6 ರಿಂದ 8 ರವರು ಬಂದು ಜಗಳ ಬಿಡಿಸಿದರು ಎಂದರೆ ಸರಿಯಲ್ಲ. ಆಗ ಆರೋಪಿತರು ಜಗಳ ಬಿಟ್ಟು ಹೋಗುವಾಗ ನಿಮಗೆ ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೇದರಿಕೆ ಹಾಕಿದರು ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಸರ್ಕಾರಿ ಜಾಲಿ ಬಡಿಗೆಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಗುರುತಿಸಲು ನಿರಾಕರಿಸಿರುವುದರಿಂದ ಅದನ್ನು ಮು.ಮಾ 1 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ** ಆರೋಪಿ ಪರ ವಕೀಲರಿಂದ: ವಕೀಲರು ಪಾಟೀಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**